2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಭದ್ರಾವತಿ.

ದಿನಾಂಕಃ 29.05.2024 ರಂದು ಡಿ.ಡಬ್ಲ್ಯೂ-2 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್.ವಿ ವಕೀಲರಿಂದಃ**

1. ಭದ್ರಾ ಕಾಲೋನಿಯಲ್ಲಿ 5 ವರ್ಷಗಳಿಂದ ವಾಸ ಇದ್ದೇನೆ. ಅದಕ್ಕಿಂತ ಮೊದಲು ಬೆಂಗಳೂರಿನಲ್ಲಿ 15 ವರ್ಷಗಳ ಕಾಲ ಇದ್ದೆ. ಅದಕ್ಕಿಂತ ಮೊದಲು ಬಸಳಿಕಟ್ಟೆ ಸಿದ್ದಪುರದಲ್ಲಿ 40 ವರ್ಷಗಳ ಕಾಲ ಇದ್ದೆ. ಸದರಿ ಗ್ರಾಮಗಳಲ್ಲಿ ನನಗೆ ಆಸ್ತಿ ಇಲ್ಲ ಎಂದರೆ ಸರಿಯಲ್ಲ. 2019 ರಲ್ಲಿ ಆಸ್ತಿ ಖರೀದಿ ಮಾಡಿದ್ದೇನೆ. ವಾದಿಯವರ ಪರಿಚಯ ಇದೆ. ಪ್ರತಿವಾದಿಯವರು ನನ್ನ ಸಂಬಂಧಿಕರು ಅಲ್ಲ. 30 ವರ್ಷಗಳಿಂದ ಸದರಿಯವರ ಪರಿಚಯ ಇದೆ.

2. ವಾದಿಯವರ ಆಸ್ತಿ ಪ್ರತಿವಾದಿಯವರ ಆಸ್ತಿಯ ಪಕ್ಕದಲ್ಲಿ ಇದೆ. ಪ್ರತಿವಾದಿಯವರ ಆಸ್ತಿಯಲ್ಲಿ ಅಡಿಕೆ ಮತ್ತು ತೆಂಗಿನ ಮರಗಳು ಇವೆ ಮತ್ತು ತೂಕದ ಬ್ರಿಡ್ಜ್ ಇದೆ. ವಾದಿಯವರಿಗೆ ಸರ್ವೆ ನಂ 7/2 ರಲ್ಲಿ 2 ಎಕರೆ 22 ಗುಂಟೆ ಆಸ್ತಿ ಇದೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿ ವಾದಿಯವರಿಗೆ ವಿಭಾಗ ಪತರದ ಮೂಖಾಂತರ ಬಂದಿದೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿನ ಖಾತೆ ಮತ್ತು ಪಹಣಿ ಪರಿಶೀಲನೆ ಮಾಡಿಲ್ಲ. ಸದರಿ ಜಮೀನಿಗೆ ಅಳತೆ ಮಾಡಿಸಿರುತ್ತಾರೆ ಎಂದರೆ

ಸರಿಯಲ್ಲ. ಸದರಿ ಅಳತೆಯ ಪ್ರಕಾರ ಪ್ರತಿವಾದಿಯವರು 12 ಗುಂಟೆ ಜಮೀನನ್ನು ಒತ್ತುವರಿ ಮಾಡಿದಾರೆ ಎಂದರೆ ಸರಿಯಲ್ಲ. ವಾದಿಯವರು ಸದರಿಯವರನ್ನು ಸದರಿ ವಿಷಯದ ಬಗ್ಗೆ ಕರೆದು ಹೇಳಿದರು ಮತ್ತು ಪೋಲಿಸ್ ದೂರು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ದಾವೆಯ ಬಗ್ಗೆ ಪ್ರತಿವಾದಿ ನನಗೆ ಹೇಳಿಲ್ಲ. ಸದರಿಯವರು ಹೇಳಿದ್ದಕ್ಕೆ ನಾನು ಸಾಕ್ಷಿ ಹೇಳಲು ಬಂದಿದ್ದೇನೆ. ಪ್ರತಿವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರ ಜಮೀನಿನ ಬಗ್ಗೆ ಮಾಹಿತಿ ಇಲ್ಲ.

**(ಮರು ವಿಚಾರಣೆ ಇರುವುದಿಲ್ಲ.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

Sd/-

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಭದ್ರಾವತಿ.